



ಕರ್ಕಿ ಕೃಷ್ಣಮೂರ್ತಿ

ಪ್ರದೀಪನ ಕಾರು ಕೊಳ್ಳುವ ಆಸೆ ಇಂದು ನಿನ್ನೆಯದಲ್ಲ. 'ಬೆಂಗಳೂರಲ್ಲಿ ದುಡಿಯಲು ಶುರುಮಾಡಿ ಹದಿನೈದು ವರ್ಷವಾಯಿತು, ಕನಿಷ್ಠ ಒಂದು ಕಾರೂ ಇಲ್ಲವೆಂದರೆ ಹೇಗೆ?' ಎಂದು ಅವನ ಹೆಂಡತಿಯೂ ಹೇಳಲು ಶುರುಮಾಡಿ ಐದಾರು ವರ್ಷಗಳೇ ಆಗಿವೆ. ಬೈಕಿನ ಮೇಲೆ ಕೂತು ಟ್ರಾಫಿಕ್ಕಿನ ಹೊಗೆ ಕುಡಿಯುತ್ತಿರುವಾಗ, ಮಳೆಗೆ ಒದ್ದೆಯಾದ ಬೂಟನ್ನು ಟೆರೇಸಿನ ಮೇಲೆ ಒಣಗಿಸುತ್ತಿರುವಾಗಲೆಲ್ಲ ತನಗೂ ಒಂದು ಕಾರು ಬೇಕೆಂಬ ಬಯಕೆ ಒತ್ತರಿಸಿ ಬರುತ್ತದೆ. ಪಕ್ಕದ ಮನೆಯವ ತನ್ನ ಕಾರನ್ನು ಪೈಪಿನಿಂದ ನೀರು ಹಾರಿಸಿ ತೊಳೆಯುವುದ ನೋಡಿದಾಗಲಂತೂ ಅದು ದುಪ್ಪಟ್ಟಾಗುತ್ತದೆ.

ಬೈಕಿನ ಸಾಲದ ಕಂತೇ ಇನ್ನೂ ತೀರದಿರುವಾಗ ಕಾರು ಕೊಳ್ಳುವುದು ಸುಲಭದ ಮಾತಲ್ಲ. ಹಾಗಂತ ಎಷ್ಟುದಿನ ಕೂರಲಾದೀತು? ಯಾರಾದರೂ ಉಪಯೋಗಿಸಿದ ಒಳ್ಳೆಯ ಕಾರು ಕೊಡುವವರಿದ್ದಾರೋ, ಓಎಲ್‌ಎಕ್ಸ್‌ನಲ್ಲಿ ಯಾವುದಾದರೂ ಡೀಲ್ ಇದೆಯೋ ಎಂಬುದರ ಬಗ್ಗೆ ಆತ ಸದಾ ಕಣ್ಣಿಟ್ಟಿರುತ್ತಿದ್ದ. ಹಬ್ಬಗಳ ಸಂದರ್ಭದಲ್ಲಿ ಶಾಪಿಂಗ್ ಮಾಡಿದರೆ ಕಾರು ಬಹುಮಾನವಾಗಿ ಸಿಗುವಕಡೆಗೆಲ್ಲಾ ಹೆಚ್ಚೆಚ್ಚು ಸಾಮಾನು ಕೊಳ್ಳುತ್ತಿದ್ದ. ಹಾಗೆ ಖರೀದಿಸಿ, ಉಪಯೋಗಿಸದೇ ಬಿದ್ದ ವಸ್ತುಗಳು ಮನೆಯಲ್ಲಿ ಹೆಚ್ಚಾಗುತ್ತಾ ಹೋದವೇ ವಿನಃ ಕಾರು ಮಾತ್ರ ಸಿಗಲಿಲ್ಲ. ಈಗ ಮಗನೂ ಶಾಲೆಗೆ ಹೋಗುವಷ್ಟು ದೊಡ್ಡವನಾದಮೇಲೆ ಕಾರು ಕೊಳ್ಳಬೇಕಾದ 'ಒತ್ತಡ'ವೂ ಹೆಚ್ಚಿದೆ.

ಈಗೆಲ್ಲ ಮೊದಲಿನಂತಿಲ್ಲವಲ್ಲ. ದಿನಬೆಳಗಾದರೆ ಫೋನ್ ಮಾಡಿ ಸಾಲಬೇಕಾ ಎಂದು ಕೇಳುವ ಬ್ಯಾಂಕುಗಳು ಸಾಕಷ್ಟಿವೆ. ಶೋರೂಮುಗಳಲ್ಲಿ ಕಾರುಗಳ ಡಿಸ್ಕೌಂಟ್ ವ್ಯಾಪಾರದ ಭರಾಟೆಯೂ ಕಡಿಮೆಯೇನಿಲ್ಲ. ಇವುಗಳ ಪ್ರಯೋಜನ ಪಡೆಯದಿದ್ದರೆ ಹೇಗೆ? ಕೊನೆಗೂ ಒಂದು ಕಾರು ತಂದು ಮನೆಯ ಮುಂದೆ ನಿಲ್ಲಿಸಿಯೇ ಬಿಟ್ಟ ಪ್ರದೀಪ.

ಸಮಸ್ಯೆ ಎದುರಾದದ್ದು ಅಲ್ಲಿಯೇ.

ಮನೆಯ ಪೋರ್ಟಿಕೋದಲ್ಲಿ ಕಾರ್ ನಿಲ್ಲಿಸಲು ಜಾಗವಿತ್ತಾದರೂ ಗೇಟು ತುಸು ಚಿಕ್ಕದಾಗಿತ್ತು. ಕಾರಿನ ಅಗಲಕ್ಕಿಂತ ಐದಾರು ಇಂಚು ಕಡಿಮೆ. ಏನೇ ಮಾಡಿದರೂ ಕಾರನ್ನು ಒಳತರಲು ಸಾಧ್ಯವಿರಲಿಲ್ಲ. ಹಾಗಂತ ರಸ್ತೆಯ ಬದಿಗೆ ನಿಲ್ಲಿಸಿದರೆ ಪಕ್ಕದಲ್ಲಿ ಮತ್ತೊಂದು ವಾಹನ ಹೋಗಲು ಪರದಾಡಬೇಕಾದಂಥ ಸಣ್ಣ ರಸ್ತೆ ಅದು, ಮೇಲಾಗಿ ಹೊಸ ಕಾರನ್ನು ರಾತ್ರಿಯಿಡೀ ಹೊರಗೆ ಪಾರ್ಕ್ ಮಾಡಲು ಮನಸ್ಸೂ ಇರಲಿಲ್ಲ ಪ್ರದೀಪನಿಗೆ. ಹೀಗಾಗಿ ಕಂಪೌಂಡ್ ಒಡೆದು ಗೇಟನ್ನು ಅಗಲ ಮಾಡದೇ ಬೇರೆ ವಿಧಿಯಿರಲಿಲ್ಲ.

ಪ್ರದೀಪನ ಮನೆಯ ಮಾಲೀಕ ಇದ್ದುದು ದುಬಾಯಿಯಲ್ಲಿ. ಅವನೊಡನೆ ವಿಷಯ ಪ್ರಸ್ತಾಪವಾಯಿತು. ಏನು, ಹೇಗೆ, ಖರ್ಚು ಪೂರಾ ಪ್ರದೀಪನದೇ, ಕಂಪೌಂಡಿನ ಈಗಿನ